ಅವರು ಏನು ಮಾಡುತ್ತಾ ಇದ್ದಾರೋ ನನಗಂತೂ ಗೊತ್ತಿಲ್ಲ. ಇವತ್ತು ಜನ ಇದನ್ನು ಸಹಿಸುವುದಿಲ್ಲ. ನಾನು ನಿಮಗೆ ಇನ್ನೊಮ್ಮೆ ಒತ್ತಾಯ ಮಾಡುತ್ತಿದ್ದೀನಿ ದಯವಿಟ್ಟು ಬಿಟಿಎಸ್ ದರಗಳನ್ನು ಸಹ ಕಡಿಮೆ ಮಾಡಬೇಕು. ಈಗ ಹೌಸ್ ಕಮಿಟಿ ಮಾಡಬೇಕು ಎಂದು. ನಾವು ಒತ್ತಾಯ ಮಾಡಿದ್ದೇವೆ. ನೀವು ಹೇಳಿದ್ದೀರಿ. ಆ ಸಮಿತಿಯು ಕಾಂಪ್ರೆಹೆನ್ಸೀವ್ ಸ್ಟಡಿ ಮಾಡಿದ ಮೇಲೆ ರಿಪೋರ್ಟ್ ಕೊಡಲಿ. ಅಷ್ಟರಲ್ಲಿ ನಿಮ್ಮ ಸರ್ಕಾರ ಇದ್ದರೆ ಇಂಪ್ಲಿಮೆಂಟ್ ಮಾಡುವುದೋ ಬಿಡುವುದೋ ಆಗುತ್ತದೆ. ಇಲ್ಲದಿದ್ದರೆ ಅದು ಕಣ್ಣು ಒರೆಸತಕ್ಕ ಕೆಲಸ ಆಗುತ್ತದೆ.

ಶ್ರೀ ಆರ್.ಎ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ನಿನ್ನೆ ಒಂದು ಮಾತನ್ನು ಮುಖ್ಯಮಂತ್ರಿಯವರು ಹೇಳಿದ್ದಾರೆ. ಏರಿಸಿರುವ ಬಸ್ ದರವನ್ನು ಶೇಕಡ ೭ರಷ್ಟು ಕಡಿಮೆ ಮಾಡಿದರೂ ಸಹ ಪೂರ್ಣ ಚರ್ಚೆ ಮಾಡಲು ತಯಾರು ಇದ್ದೇವೆ ಎಂದು. ತಾವು ನಿನ್ನೆ ಸಂಜೆ ಈ ಮಾತನ್ನು ಹೇಳಿದ್ದೀರಿ. ಇವರ ಬಗ್ಗೆಯೂ ತಾವು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾವು ಬಿಜೆಪಿಯವರು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ವಿಷಯವನ್ನು ಸ್ಪಷ್ಟವಾಗಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇವೆ. ಹೊರಗಡೆ ಇರತಕ್ಕ ಸಾಮಾನ್ಯ ಜನರು ನಮ್ಮನ್ನು ಅಪಾರ್ಥ ಮಾಡಿಕೊಳ್ಳಬಾರದು. ನೀವು ಶೇಕಡ ೨೫ರಷ್ಟು ಏರಿಸಿ ಕೇವಲ ಶೇಕಡ ೭ರಷ್ಟು ಇಳಿಸಿದ್ದೀರಿ. ಈ ರೀತಿ ಶೇಕಡ ೭ ಪರ್ಸೆಂಟ್ ಇಳಿಸಿರುವುದು ಯಾವ ಧರ್ಮ. ಇದರಿಂದ ನಿಜವಾಗಿಯೂ ಜನರಿಗೆ ವಂಚನೆ ಮಾಡಿದಂತಾಗಿದೆ. ಸದನದ ಸಮಿತಿ ಮಾಡುತ್ತೀರೋ ಬಿಡುತ್ತೀರೋ ನಿಮಗೆ ಬಿಟ್ಟಿರುವುದು. ಸದನದ ಸಮಿತಿ ವರದಿಗಳಿಂದ ಯಾವುದೇ ಉಪಯೋಗವಾಗುವುದಿಲ್ಲ. ಸದನದ ಸಮಿತಿ ಮಾಡುವುದಾದರೆ ಮಾಡಿ, ಆದರೆ ಆ ಸಮಿತಿ ತನ್ನ ವರದಿಯನ್ನು ಕೊಡುವವರೆಗೆ ನೀವು ಏರಿಸಿರುವ ದರವನ್ನು ವಾಪಸ್ಸು ತೆಗೆದುಕೊಳ್ಳಬೇಕು. ಸಮಿತಿಯು ಕೊಟ್ಟ ವರದಿಯ ಆಧಾರದಮೇಲೆ ನಿಮಗೆ ಸರಿಪಡಿಸಲು ಅವಕಾಶವಿದೆ. ಈ ಏರಿಸಿರುವ ದರವನ್ನು ಪೂರ್ತಿಯಾಗಿ ವಾಪಸ್ಸು ತೆಗೆದುಕೊಳ್ಳದಿದ್ದರೆ ಈ ಸರ್ಕಾರದ ನೀತಿಯನ್ನು ಸಂಪೂರ್ಣವಾಗಿ ಖಂಡಿಸಿ ಬಿಜೆಪಿಯವರಾದ ನಾವು ವಾಕ್‌ಔಟ್ ಮಾಡಬೇಕಾಗುತ್ತದೆ. ನೀವು ಶೇಕಡ ೭ರಷ್ಟು ಕಡಿಮೆ ಮಾಡಿ ಜನರಿಗೆ ವಂಚನೆ ಮಾಡಿದ್ದೀರಿ ಎಂದು ಹೇಳಿ ನಿಮ್ಮ ನೀತಿಯನ್ನು ಖಂಡಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಶ್ರೀ ಬಿ.ಎಸ್. ಯಡಿಯೂರಪ್ಪನವರು ಸಭಾತ್ಯಾಗ ಮಾಡಿದರು)

ಶ್ರೀ ಆರ್.ಎ. ದೇಶಪಾಂಡೆ:- ನಾವು ನಮ್ಮ ಕರ್ತವ್ಯವನ್ನು ಮಾಡಬೇಕಾಗಿದೆ. ಈ ಬಗ್ಗೆ ಮುಖ್ಯಮಂತ್ರಿಗಳು ಹೇಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ತಮ್ಮ ಮಾತಿಗೆ ನಾವು ಗೌರವ ಕೊಟ್ಟಿದ್ದೇವೆ. ಇಲ್ಲಿ ನಾವು ನಮ್ಮ ಧರಣಿಯನ್ನು ಹಿಂದಕ್ಕೆ ತೆಗೆದುಕೊಂಡಿರತಕ್ಕದ್ದು ಬಹಳ ಸಂತೋಷದಿಂದ ಇಲ್ಲ. ನಮಗಂತೂ ನಿಜವಾಗಿಯೂ ಇದರಲ್ಲಿ ನಂಬಿಕೆ ಇಲ್ಲ. ನನಗೆ ಬಹಳ ವ್ಯಥೆಯಾಗಿದೆ. ನಾವು ಯಾವ ಪುರುಷಾರ್ಥಕ್ಕಾಗಿ ಧರಣಿಯನ್ನು ಹಿಂದಕ್ಕೆ ತೆಗೆದುಕೊಂಡಿದ್ದೇವೆ ಎಂದು ನನಗೆ ಅನ್ನಿಸುತ್ತದೆ. ಇಲ್ಲಿ ಮಿಕ್ಕ ಎಲ್ಲಾ ಕಾರ್ಯಕಲಾಪಗಳಲ್ಲಿ ಭಾಗವಹಿಸದೆ ವಂಚಿತರಾಗುತ್ತೇವೆ ಎನ್ನುವ ಪರಿಸ್ಥಿತಿ ಇರುವುದರಿಂದ ನಾವು ಈ ಕ್ರಮವನ್ನು ಕೈಗೊಂಡಿದ್ದೇವೆಯೇ ಹೊರತು ಬೇರೆ ಏನೂ ಅಲ್ಲ. ಈ ಬಗ್ಗೆ ನನಗೆ ಯಾವುದೇ ಆಶಾಭಾವನೆ ಅಥವಾ ಭರವಸೆ ಇಲ್ಲ. ದರವನ್ನು ಶೇಕಡ ೨೫ರಷ್ಟು ಏರಿಸಿ ಮತ್ತೇ ಶೇಕಡ ೭ರಷ್ಟು ಇಳಿಸಿರುವುದಕ್ಕೆ ಸರಿಯಾದ ವೈಜ್ಞಾನಿಕ ವಾದ ಆಧಾರಗಳಿಲ್ಲದೆ, ಸಾರಾಸಗಟು ಏಳು ಪರ್ಸೆಂಟು ಯಾವುದೇ ಮಾತುಕತೆ ನಮ್ಮ ಜೊತೆ ಇಲ್ಲದೆ ಇಳಿಸಿದ್ದೀರಿ. ಹಾಗೇ ಏರಿಸುವಾಗಲೂ ನಮ್ಮ ಜೊತೆ ಮಾತನಾಡಲಿಲ್ಲ. ವಿರೋಧಪಕ್ಷದವರನ್ನು ಕಗ್ಗತ್ತಲೆಯಲ್ಲಿಟ್ಟು ಈ ಸರ್ಕಾರ ನಿರ್ಧಾರ ತೆಗೆದುಕೊಂಡಿದೆ. ಸರ್ಕಾರದ ಈ ನೀತಿ ಸರಿಯಲ್ಲ.